## ಫೇಸ್‌ಬುಕ್ ಗೆಳೆಯರು

ಓರ್ವ ಶ್ರೀಮಂತ ಮಹಿಳೆ ಶಾಪಿಂಗ್ ಮುಗಿಸಿ ಕಾರು ಡ್ರೈವ್ ಮಾಡಿಕೊಂಡು ಮನೆಯತ್ತ ಹೊರಟಿದ್ದಳು. ಟ್ರಾಫಿಕ್ ಸಿಗ್ನಲ್ ಬಂದಾಗ ಕಾರು ನಿಲ್ಲಿಸಿದಳು. ಆಗ ಅಲ್ಲೊಬ್ಬ ಭಿಕ್ಷುಕ ನಿಂತಿರುವುದನ್ನು ಗಮನಿಸಿ, ಮತ್ತೆ ಮತ್ತೆ ಅವನನ್ನೇ ನೋಡುತ್ತ, 'ಏ... ನೀನು ನನಗೆ ಬಹಳ ಪರಿಚಯ ಅನ್ನಿಸ್ತಾ ಇದೆಯಲ್ಲ? ಈ ಮೊದಲು ನಿನ್ನನ್ನು ಎಲ್ಲಿಯಾದರೂ ನೋಡಿದ್ದೆನಾ?' ಎಂದು ಕೇಳಿದಳು. ಆ ಭಿಕ್ಷುಕ ತಡಮಾಡದೇ, 'ಇದ್ಯಾಕೆ ಹೀಗ್ ಕೇಳ್ತೀರಾ? ನಾವಿಬ್ರೂ ಫೇಸ್‌ಬುಕ್ ಫ್ರೆಂಡ್ಸ್ ಅಲ್ವಾ? ಮರ್ತು ಬಿಟ್ರಾ?' ಎಂದಾಗ ಅವಳು ತಬ್ಬಿಬ್ಬು.

**ಅರವಿಂದ ಜಿ. ಜೋಷಿ**






ಕಲೆ: ಗಣೇಶ ಆಚಾರ್ಯ

## ಸಂಕ್ಷಿಪ್ತ ರೂಪ!

ಒಮ್ಮೆ ಹರೀಶ ಬೆಂಗಳೂರು ವಿಮಾನ ನಿಲ್ದಾಣಕ್ಕೆ ಹೋಗಲು ಟ್ಯಾಕ್ಸಿ ಬುಕ್ ಮಾಡಿದ. ಗಮ್ಯಸ್ಥಾನ ತಲುಪಿದಾಗ ಟ್ಯಾಕ್ಸಿ ಚಾಲಕ ತನ್ನ ವಿಸಿಟಿಂಗ್ ಕಾರ್ಡ್ ನೀಡಿದ. ಅದರಲ್ಲಿ ಡಾ. ರಮಾನಂದ ಭಂಡಾರಿ, ಪಿಎಚ್.ಡಿ. ಎಂದು ಬರೆಯಲಾಗಿತ್ತು. ಆಶ್ಚರ್ಯಗೊಂಡ ಹರೀಶ, 'ಇಷ್ಟು ದೊಡ್ಡ ಪದವಿ ಪಡೆದು ಯಾಕೆ ಚಾಲಕನ ಕೆಲಸ ಮಾಡುತ್ತಿದ್ದೀರಿ?' ಎಂದು ಕೇಳಿದ. ಆತ ನಕ್ಕು, 'Dr ಅನ್ನುವುದು ಡ್ರೈವರ್ ಪದದ ಸಂಕ್ಷಿಪ್ತ ರೂಪ. ಪಿಎಚ್.ಡಿ. ಎನ್ನುವುದು ಖಾಸಗಿ ಬಾಡಿಗೆ ಚಾಲಕ (Private hired driver) ಪದದ ಸಂಕ್ಷಿಪ್ತ ರೂಪ' ಎಂದುತ್ತರಿಸಿದ. ಹರೀಶ ಮಾತಿಲ್ಲದೆ ನಿಂತ.

**ರಮಣ್ ಶೆಟ್ಟಿ ರೆಂಜಾಳ್**